ಹಾಸನದ ಜನಿವಾರ ಎಂಬ ಗ್ರಾಮದವರಾದ ಜೆ.ಆರ್. ರವಿಕುಮಾರ್ ಸುದೀರ್ಘ ಕಾಲ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡವರು. ಕಾದಂಬರಿ, ಕಥೆ ಮತ್ತು ಕವಿತೆಗಳನ್ನು ಬರೆಯುವುದು ಅವರ ಹವ್ಯಾಸ. ಈಗ ಮೊದಲ ಕಥಾಸಂಕಲನ ಪ್ರಕಟಿಸುವ ಹುಮ್ಮಸ್ಸಿನಲ್ಲಿದ್ದಾರೆ.

ಗೊದ್ಲೆ ಮಧ್ಯಾಹ್ನ ಶಾಲೆಯಿಂದ ಊಟಕ್ಕೆ ಬಂದಾಗ ಮುಳ್ಕಟ್ಟ ಸಿಲ್ವರ್ ತಟ್ಟೆ ತುಂಬ ಬಾಡು ಹಾಕಿಸಿಕೊಂಡು ತಿನ್ನುತ್ತಾ ಕುಳಿತಿದ್ದ. ಅದನ್ನು ನೋಡಿದ ಗೊದ್ಲೆ ಬ್ಯಾಗನ್ನು ಮಾಮೂಲಿ ಜಾಗದಲ್ಲಿರಿಸಿ ಕೈಕಾಲು ಮುಖ ತೊಳೆದು ವಲ್ಲಿಯಿಂದ ಒರೆಸಿಕೊಂಡು ಮಾಂಸದಡುಗೆ ಮಾಡಿದಾಗಲೆಲ್ಲ ಮಾಡುವಂತೆ ಈಗಲೂ ಅಪ್ಪನ ಬಳಿ ಕೂರುತ್ತಿದ್ದ ಜಾಗ ಬಿಟ್ಟು ದೂರ ಕುಳಿತ. ಕರ್ರಿಲಿ ಪ್ರತ್ಯೇಕವಾಗಿ ಮಾಡಿದ್ದ ನೀರೆಸ್ರು, ಮುದ್ದೆ ಬಡಿಸಿದ ತಟ್ಟೆ ತಂದು ಅವನ ಮುಂದಿಟ್ಟಳು.

'ಮಗಾ ಗೊದ್ಲೆ, ಚಿಕ್ಕಂದಿನಿಂದಲೂ ನಮ್ಮಟ್ಟೀಲಿ ನೀನೊಬ್ನೆಯ ಮಾಂಸ ಮಡ್ಡಿ ತಿನ್ದೇ ಇರೋನು. ತಿನ್ನೋಕೆ ಯೋನಾಗೈತೆ ನಿಂಗೆ? ಒಂದಪ ತಿಂದು ರುಚಿ ನೋಡು. ದಿನಾ ಬಾಡು ಬೇಕು ಅಂತೀಯ' ಎಂದ ಮುಳ್ಕಟ್ಟ.

'ನಂಗೆ ಬ್ಯಾಡ ಕಣಪ್ಪೊ, ನೀನೇ ತಿನ್ನು' ಎಂದ ಗೊದ್ಲೆ.

'ಅವ್ನಿಗೆ ಸೇರಾಕ್ಕಿಲ್ಲ ಅಂದ್ಮಾಕೆ ಜುಲುಮೆ ಯಾಕ್ಮಾಡ್ತೀರ? ಸುಮ್ನೆ ಉಂಡೇಳಿ' ಎಂದ ಕರ್ರಿಲಿ, ಮುದ್ದೆ ಗುಕ್ಕು ಮಾಡಿ ಸಾರಿನಲ್ಲಿ ಉರುಳಾಡಿಸಿ ಗುಳಕ್ಕನೆ ನುಂಗಿ, ಮಾಂಸದ ತುಂಡನ್ನು ಬಾಯಿಗಿರಿಸಿಕೊಂಡಳು.

'ಬ್ರಾಂಬ್ರು ಆಗಾಕೆ ಹೊಂಟವ್ನೆ' ಎಂದು ಕೀಟಲೆ ಮಾಡಿ ನಕ್ಕ ಮುಳ್ಕಟ್ಟನನ್ನೇ ಅರೆ ಕ್ಷಣ ದಿಟ್ಟಿಸಿ ನೋಡಿದ ಗೊದ್ಲೆ, ಶಾಲೆಯ ಗಂಟೆಯ ಶಬ್ದ ಕೇಳಿ ಬಿರ ಬಿರನೆ ಉಂಡು ಬ್ಯಾಗು ನೇತಾಕಿಕೊಂಡು ಹೊರಟ.

ಸಂಜೆ ಅವನು ಬಂದಾಗ ಮುಳ್ಕಟ್ಟ ಗುಡಿಸಲು ಮೇಲ್ಛಾವಣಿಗೆ ಆಧಾರವಾಗಿ ನಿಲ್ಲಿಸಿದ್ದ ಮರದ ಕಂಬಕ್ಕೆ ಒರಗಿಕೊಂಡು ಬೀಡಿ ಸೇದುತ್ತಾ ಕುಳಿತಿದ್ದ.

ಬ್ಯಾಗನ್ನು ಕೆಳಗಿಟ್ಟ ಗೊದ್ಲೆ ಅವನಿಗೆದುರಾಗಿ ಕುಳಿತು ಕೇಳಿದ, 'ಅಪ್ಪಯ್ಯ ನಿಂಗೆ ಮುಳ್ಕಟ್ಟ ಅಂತ ಯಾರು ಹೆಸ್ರಿಟ್ಟಿದ್ದು?' ಬಾಯಿ ತುಂಬಿಕೊಂಡಿದ್ದ ಹೊಗೆಯನ್ನು ಬಿಡುತ್ತ, 'ಇನ್ನಾರು, ನನ್ನವ್ವ ನನ್ನಪ್ಪ' ಎಂದ.

'ಮತ್ತೆ ನೀನು ಚಿಕ್ಕೋನಿದ್ದಾಗಿನಿಂದ್ಲು ಗೌಡುಗಳ ಹುಲ್ಲೊಟ್ಲೊ ಹಿತ್ಲುಗಳ ಬೇಲಿಗೆ ಮುಳ್ಳು ಕಟ್ಟಿ ಕಟ್ಟಿ -ನಿಂಗೆ ಮುಳ್ಕಟ್ಟ ಅಂತ ಹೆಸ್ರು ಬಂತು ಅಂತಾವ ಇಸ್ಕೂಲಿಗೆ ಬರೋ ಗೌಡ್ರುಡ್ಲು ಯೋಳ್ತಾವೆ'.

'ನಾನ್ಯಾಕ್ಲ ಊರಲ್ಲಿರೋ ಗೌಡ್ರುಗಳ ಹಿತ್ಲಿಗೆಲ್ಲ-ಬೇಲಿ ಕಟ್ಟಗೋಗ್ಲಿ? ಅವೆಲ್ಲೊ ಆಕ್ಸಾಲ ಮಾಡವೆ'.

'ಅಲಕನಪ್ಪಯ್ಯ, ಗೌಡ್ರುಡ್ಲು, ಬ್ರಾಹ್ಮಣ ಹುಡುಗರ ಮತ್ತೆ ಅವರವ್ವಂದಿರ ಹೆಸರುಗಳು ಎಷ್ಟು ಚಂದಾಗವೆ. ಆದ್ರೆ ನಿಂದು ಮುಳ್ಕಟ್ಟ, ಅವ್ವಂದು ಕರ್ರಿಲಿ, ನಂದು ಗೊದ್ಲೆ, ಆಮ್ಯಾಕೆ ನಮ್ಮಟ್ಟಿಯ ಮಂಕ್ರ, ಗೊಳ್ಳ, ಗ್ವಾಟ, ನರಾಸಿ. ಮತ್ತವರ ಮಕ್ಳು ಹೆಸ್ರೂ ವೈನಾಗಿಲ್ಲ. ಅದೇ ಬ್ರಾಹ್ಮಣ್ರ ಹೆಸರು ನೋಡು. ಶ್ರೀಕಂಠ, ರಾಮಸ್ವಾಮಿ, ನಾರಾಯಣ, ಶ್ರೀನಿವಾಸ, ಚೂಡಾಮಣಿ, ಗಿರಿಜಾ, ವನಜಾಕ್ಷಿ'.

'ಅದ್ಕೇನ್ ಮಾಡಾನ ಬುಡು'

'ಅಪ್ಪಯ್ಯ ನನ್ನೆಸ್ರ ಗೋವಿಂದ ಅಂತ ಬದ್ಲಾಯ್ಸು' ಎಂದು ಗೊದ್ಲೆ ಗೋಗರೆಯುವ ದನಿಯಲ್ಲಿ ಕೇಳಿದ.

ಅವನ ಮುಖವನ್ನೇ ದಿಟ್ಟಿಸಿ ನೋಡಿದ ಮುಳ್ಕಟ್ಟ, 'ರಾಮ ಅಂತ ಹೆಸ್ರಿಟ್ಕಂಡೋರೂ ಮಾಡ ಬಾರ್ದ ಕೆಲ್ಸ ಮಾಡಿರಾದ ನಾ ಕಂಡೀವ್ನಿ, ಕೇಳೀವ್ನಿ. ಹೆಸ್ರಲ್ಲೇನೈತೆ ಬುಡ್ಲ' ಎಂದು ಇನ್ನೂ ಮುಂದುವರಿಯಬಹುದಾಗಿದ್ದ ಹೆಸರು ಕುರಿತ ಮಾತುಕತೆಯನ್ನು ಬೆರಳುಗಳ ನಡುವೆ ಉರಿಯುತ್ತಿದ್ದ, ಇನ್ನೂ ಐದಾರು ಧಂ ಎಳೆಯಬಹುದಾಗಿದ್ದ ಬೀಡಿಯನ್ನು ನೆಲಕ್ಕೆ ಉಜ್ಜಿ ನಂದಿಸಿ ಅಂತಿಮ ಮಾಡಿದ.

ಆದರೆ ಗೊದ್ಲೆ, ಬ್ರಾಹ್ಮಣರ ಹೆಸರುಗಳು ಮತ್ತು ಅವರ ಬಗ್ಗೆ ತನ್ನಪ್ಪನಾದಿಯಾಗಿ ಊರ ಜನರು ತೋರುತ್ತಿದ್ದ ಗೌರವಾದರಗಳ ಬಗ್ಗೆಯೇ ಯೋಚಿಸತೊಡಗಿದ.

'ಅದೇನು, ಅವರಿಗೆ ಮಾತ್ರ ಊರ ಪಟೇಲ್ರು, ಎಲ್ರೂವೆ ದೇವರಿಗೆ ಕೈ ಮುಗ್ದಂಗೆ ಮುಗಿತಾರೆ. ಗೌಡ್ರುಗಳು ಅವರೊಂದಿಗೆ ಮಾತನಾಡುವಾಗ ಎರಡು ಮೂರು ಮಾರು ದೂರ ನಿಂತಿರುತ್ತಾರೆ. ನಮ್ಮಟ್ಟಿಯವರು ತಲೆಗೆ ಸುತ್ತಿಕೊಂಡ ವಲ್ಲಿಯನ್ನು